

## ಸಾರಾ ರೆಡಿ

ಸೈಫ್ ಅಲಿ ಖಾನ್ ಮಗಳು ಸಾರಾ ಅಲಿ ಖಾನ್, ಬಾಲಿವುಡ್ ಎಂಟ್ರಿಯ ಗದ್ದಲ ಸದ್ಯಕ್ಕೆ ಕಡಿಮೆಯಾಗಿದೆ. ಆಕೆ ನಟಿಸಲು ಒಪ್ಪಿಕೊಂಡ ಆರಂಭದ ಚಿತ್ರ 'ಕೇದಾರ್‌ನಾಥ್' ನಿರ್ದೇಶಕ ಅಭಿಷೇಕ್ ಕಪೂರ್, ಆಕೆಯ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವುದರಿಂದ ಈಗ ಹಿಂದೆ ಸರಿದಿದ್ದಾನೆ. ಸದ್ಯಕ್ಕೆ ಕೇದಾರ್‌ನಾಥ್ ಮತ್ತು ನಿರ್ದೇಶಕ ರೋಹಿತ್ ಶೆಟ್ಟಿಯ 'ಸಿಂಬಾ' ಎರಡೂ ಚಿತ್ರಗಳಲ್ಲಿ ಆಕೆ ನಟಿಸುತ್ತಿದ್ದಾಳೆ.

ಅಭಿಷೇಕ್ ಕಪೂರ್ ನಿರ್ದೇಶನದ 'ಕೇದಾರ್‌ನಾಥ್' ನಲ್ಲಿ ಸುಶಾಂತ್ ಸಿಂಗ್ ರಜಪೂತ್ ನಾಯಕ. ಅದೂ ಬಿಗ್‌ಬಜೆಟ್ ಚಿತ್ರವೇ. ನಿರ್ಮಾಪಕ– ನಿರ್ದೇಶಕರ ನಡುವಣ ತಕರಾರಿನಿಂದ ಶೂಟಿಂಗ್ ನಿಧಾನವಾಗಿತ್ತು. ಈ ಮಧ್ಯೆ ರೋಹಿತ್ ಶೆಟ್ಟಿಯ 'ಸಿಂಬಾ' ಚಿತ್ರಕ್ಕೆ ಸಾರಾ ಸಹಿ ಹಾಕಿ ಡೇಟ್ಸ್ ನೀಡಿದ್ದು ಅಭಿಷೇಕ್‌ಗೆ ಸಿಟ್ಟು ಬರಿಸಿತ್ತು. ಆ ಹಿನ್ನೆಲೆಯಲ್ಲೇ ಅಭಿಷೇಕ್, ಸಾರಾಗೆ ಲಾಯರ್ ನೋಟಿಸ್ ಕೂಡಾ ನೀಡಿದ್ದ. ಈಗ ನೋಟಿಸ್ ವಿಷಯ ಮುಕ್ತಾಯಗೊಂಡಿದೆ.

'ಸಿಂಬಾ' ಚಿತ್ರದಲ್ಲಿ ಸಾರಾಗೆ ರಣವೀರ್‌ಸಿಂಗ್ ನಾಯಕ. 'ಟೆಂಪರ್' ಚಿತ್ರದ ಹಿಂದಿ ರಿಮೇಕ್ ಇದು. ಆದರೆ ರೋಹಿತ್ ಶೆಟ್ಟಿ ನಿರ್ದೇಶನದ ಕಮರ್ಷಿಯಲ್ ಚಿತ್ರವಾದುದರಿಂದ ಬಾಲಿವುಡ್‌ನಲ್ಲಿ ಭಾರೀ ನಿರೀಕ್ಷೆ ಗರಿಕೆದರಿದೆ. ಈ ಕಮರ್ಷಿಯಲ್ ಚಿತ್ರದಲ್ಲಿ ನಟಿಸಲು ಸಾರಾ ಸಾಕಷ್ಟು ಸಿದ್ಧತೆ ಮಾಡಿಕೊಳ್ಳುತ್ತಿದ್ದಾಳಂತೆ. ಮಲತಾಯಿ ಕರೀನಾ ಕಪೂರ್ ಮತ್ತು ಆಕೆಯ ಸೋದರಿ ಕರಿಷ್ಮಾ ಕಪೂರ್ ಕೂಡಾ ಇದಕ್ಕೆ ನೆರವಾಗಿದ್ದಾರಂತೆ. ಮುಖ್ಯವಾಗಿ ವಸ್ತ್ರವಿನ್ಯಾಸದ ಸಲುವಾಗಿ ಸಾರಾ, ನಿರ್ದೇಶಕ ರೋಹಿತ್ ಜತೆ ಡಿಸೈನರ್ ಮನೀಶ್ ಮಲ್ಹೋತ್ರಾ ನನ್ನು ಭೇಟಿ ಆಗಿದ್ದಾಳಂತೆ. ಕರೀನಾ ಮತ್ತು ಕರಿಷ್ಮಾ ಅವರ ನೆಚ್ಚಿನ ಡಿಸೈನರ್ ಆಗಿರುವ ಮನೀಶ್, 'ಸಿಂಬಾ' ಚಿತ್ರದಲ್ಲಿ ಸಾರಾಳ ಲುಕ್ ಅನ್ನು ಭರ್ಜರಿಗೊಳಿಸಲು ಒಪ್ಪಿದ್ದಾನಂತೆ.



## ಅನೂಷ್ಕಾ ವಿಶೇಷ

'ಸಂಜು' ಚಿತ್ರದಲ್ಲಿ ಅನೂಷ್ಕಾ ಶರ್ಮಾ ವಿಶೇಷ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಆರಂಭದಲ್ಲಿ ಚಿತ್ರಕಥೆಯಲ್ಲಿ ಈ ಪಾತ್ರ ಇರಲಿಲ್ಲ. ಆದರೆ ನಿರ್ದೇಶಕ ರಾಜ್‌ಕುಮಾರ್ ಹಿರಾನಿ ಮತ್ತು ಜತೆಯಾಗಿ ಚಿತ್ರಕಥೆ ಬರೆದ ಅಭಿಜಾತ್ ಜೋಶಿ ಇಬ್ಬರೂ ಈ ಹೊಸ ಪಾತ್ರವೊಂದರ ಸೃಷ್ಟಿಗೆ ಕಾರಣರಾಗಿದ್ದಾರೆ.

ಅನೂಷ್ಕಾ ಶರ್ಮಾ ಈ ಚಿತ್ರದಲ್ಲಿ ಒಬ್ಬ ಲಂಡನ್ನಿನಿಂದ ಬರುವ ಲೇಖಕಿ. ಸಂಜು ಆಕೆಯನ್ನು ತನ್ನ ಜೀವನಚರಿತ್ರೆ ಬರೆಯಲು ಹೇಳುತ್ತಾನೆ. ಆದರೆ ಆಕೆ ಒಪ್ಪುವುದಿಲ್ಲ. 'ಪಾತ್ರದ ನಿರೂಪಣೆ ವಿಶಿಷ್ಟವಾಗಿದೆ. ನನ್ನ ಮತ್ತು ಜೋಶಿಯ ಅನುಭವಗಳನ್ನೇ ಇಟ್ಟುಕೊಂಡು ಈ ಪಾತ್ರ ಹೆಣೆದಿದ್ದೇವೆ' ಎಂದಿದ್ದಾರೆ ಹಿರಾನಿ.

ರಣಬೀರ್ ಈ ಚಿತ್ರದಲ್ಲಿ ವಿಭಿನ್ನ ಮೇಕಪ್ ನಲ್ಲಿ ಕಾಣಿಸಿಕೊಂಡಿದ್ದಾನೆ. ಅನೂಷ್ಕಾ ಮತ್ತು ರಣಬೀರ್ ಜೊತೆಗಿರುವ ಚಿತ್ರದ ಮೊದಲ ಪೋಸ್ಟರ್ ಕೂಡಾ ಬಿಡುಗಡೆಯಾಗಿ ಗಮನ ಸೆಳೆದಿದೆ. 'ವಿಶೇಷ ಪಾತ್ರವಾದರೂ ಅನೂಷ್ಕಾ ಈ ಪಾತ್ರಕ್ಕಾಗಿ ಸಾಕಷ್ಟು ಶ್ರಮ ಪಟ್ಟಿದ್ದಾಳೆ' ಎಂದೂ ನಿರ್ದೇಶಕ ಹಿರಾನಿ ಹೊಗಳಿದ್ದಾರೆ.

■ ಬಿಂದು